


ಅರ್ಥ! ಮೀಸೆ ಮೊಳೆಯುವ ಮುನ್ನವೇ ಹುಡುಗರ ಫೇಸ್‌ಬುಕ್, ಟ್ವಿಟ್ಟರ್, ಇನ್‌ಸ್ಟಾಗ್ರಾಮ್ ಅಕೌಂಟುಗಳು ಆರಂಭವಾಗಿರುತ್ತವೆ. ಅಲ್ಫಾಬೆಟ್ ಕಲಿತಾಕ್ಷಣ ಪುಟ್ಟ ಹುಡುಗಿಗೂ ವಾಟ್ಸಪ್ ಒತ್ತಲು ತಿಳಿದಿರುತ್ತದೆ. ಇನ್ನು ಸೆಲೆಬ್ರಿಟಿಗಳು ಸಾಮಾಜಿಕ ಜಾಲತಾಣದಿಂದ ದೂರ ಇದ್ದರೆ ಹೇಗೆ? ಇವತ್ತು ಸೆಲೆಬ್ರಿಟಿಯೊಬ್ಬನ ಬ್ರ್ಯಾಂಡ್ ಪವರ್ ಗೊತ್ತಾಗುವುದೇ ಆತನಿಗೆ ಸಾಮಾಜಿಕ ಜಾಲತಾಣದಲ್ಲಿ ಎಷ್ಟು ಹಿಂಬಾಲಕರಿದ್ದಾರೆ ಎನ್ನುವುದರ ಮೂಲಕ. ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಹಿಂಬಾಲಕರಿದ್ದಷ್ಟೂ ಅವರ ಜನಪ್ರಿಯತೆ ಹೆಚ್ಚು. ಅವರ ಜನಪ್ರಿಯತೆ ಹೆಚ್ಚಾದಷ್ಟೂ ಕಂಪೆನಿಗಳು ಅವರಿಗೆ ಕೊಡುವ ಜಾಹೀರಾತುಗಳನ್ನು ಏರಿಸುತ್ತವೆ.

ಟ್ವಿಟ್ಟರ್‌ನಲ್ಲಿ ಈಗ ಅತ್ಯಧಿಕ ಹಿಂಬಾಲಕರನ್ನು ಹೊಂದಿರುವಾತ ಶಾರೂಕ್ ಖಾನ್. ಆತನ ಹಿಂಬಾಲಕರ ಸಂಖ್ಯೆ 3.29 ಕೋಟಿ. ಪ್ರತಿದಿನವೂ ಈ ಟ್ವಿಟ್ಟರ್ ಖಾತೆಯಲ್ಲಿ ತಾನೇನು ತಿಂದೆ ಎನ್ನುವುದರಿಂದ ಹಿಡಿದು ಎಷ್ಟು ಹೊತ್ತಿಗೆ ನಿದ್ರೆ ಮಾಡಿದೆ ಎನ್ನುವಲ್ಲಿಯವರೆಗೆ ಶಾರೂಕ್ ಸಣ್ಣ ಪುಟ್ಟ ವಿವರಗಳನ್ನೂ ಟ್ವೀಟ್ ಮಾಡುತ್ತಾನೆ. ಆತನಿಗೆ ಟ್ವಿಟ್ಟರ್ ಖಾತೆಯಲ್ಲಿ ಪ್ರಬಲ ಪೈಪೋಟಿ ನೀಡುತ್ತಿರುವುದು ಅಮಿತಾಭ್ ಬಚ್ಚನ್. ಆತನ ಹಿಂಬಾಲಕರ ಸಂಖ್ಯೆ 3.28 ಕೋಟಿ. ಇತ್ತೀಚೆಗೆ ಇವರಿಬ್ಬರ ಮಧ್ಯೆ ಒಂದು ಪ್ರಹಸನವೂ ನಡೆಯಿತು. ಟ್ವಿಟ್ಟರ್ ನಲ್ಲಿ ಇತ್ತೀಚಿನವರೆಗೂ ಮೊದಲ ಸ್ಥಾನದಲ್ಲಿ ಇದ್ದವನು ಅಮಿತಾಭ್. ಆದರೆ ಟ್ವಿಟ್ಟರ್ ಕಂಪೆನಿ ಈತನ ಖಾತೆಯಿಂದ ಸುಮಾರು 26 ಸಾವಿರ ಹೆಸರುಗಳನ್ನು ಡಿಲೀಟ್ ಮಾಡಿದೆಯಂತೆ. ಹಾಗಾಗಿ ಆತ ಎರಡನೇ ಸ್ಥಾನಕ್ಕೆ ಇಳಿದಿದ್ದಾನೆ. 'ಟ್ವಿಟ್ಟರ್ ಹೀಗೆ ಮಾಡಿದ್ದು ಸರಿಯಲ್ಲ. ನಾನು ಟ್ವಿಟ್ಟರ್ ಖಾತೆಯನ್ನೇ ಕ್ಲೋಸ್




**ಸಾಮಾಜಿಕ ಜಾಲತಾಣಗಳಲ್ಲಿ ಸೆಲೆಬ್ರಿಟಿಗಳ ಹಿಂಬಾಲಕರು**
(ಕೋಟಿಗಳಲ್ಲಿ)

**ಟ್ವಿಟ್ಟರ್ ಹಿಂಬಾಲಕರ ಸಂಖ್ಯೆ**

| | |
|---|---|
| 1. ಶಾರೂಕ್ ಖಾನ್ | 3.29 |
| 2. ಅಮಿತಾಭ್ ಬಚ್ಚನ್ | 3.28 |
| 3. ವಿರಾಟ್ ಕೊಹ್ಲಿ | 2.26 |
| 4. ದೀಪಿಕಾ ಪಡುಕೋಣೆ | 2.4 |
| 5. ಅನೂಷ್ಕಾ ಶರ್ಮಾ | 1.49 |

**ಇನ್‌ಸ್ಟಾಗ್ರಾಮ್ ಹಿಂಬಾಲಕರ ಸಂಖ್ಯೆ**

| | |
|---|---|
| 1. ದೀಪಿಕಾ ಪಡುಕೋಣೆ | 2.15 |
| 2. ಅಲಿಯಾ ಭಟ್ | 2.01 |
| 3. ಜಾಕ್ವೆಲಿನ್ ಫೆರ್ನಾಂಡಿಸ್ | 1.65 |
| 4. ವರುಣ್ ಧವನ್ | 1.21 |
| 5. ರಣ್‌ಬೀರ್ ಸಿಂಗ್ | 1.07 |